ದಿನಾಂಕ 04-06-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಮುಖ್ಯವಿಚಾರಣೆ: ಸ.ಸ. ಅ ರವರಿಂದ:-**

ಎ. ಸಿ. ರವರ ಆದೇಶ ಇಲ್ಲದೆ ಮ್ಯುಟೇಶನ್ ಆದ ಬಗ್ಗೆ ನಾನು ವರದಿ ಮಾಡಿದ್ದೆ. ಸಾಕ್ಷಿಯು 2 ಮ್ಯುಟೇಶನ್‌ಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ-4 & 5 ಎಂದು ಗುರುತಿಸಲಾಯಿತು. ಸಾಕ್ಷಿಯು ದಿ.01-10-2013 ರ ದಾಖಲೆಯನ್ನು ನೋಡಿ ಇದನ್ನು ಹೊಸಗೆರಪ್ಪ ರವರು ನೀಡಿದ್ದು ಎಂದು ಅದನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆಯನ್ನು ನಿಪಿ-6 ಎಂದು ಗುರುತಿಸಲಾಯಿತು. ಸಾಕ್ಷಿಯು ದಿ.05-10-2013 ರಂದು ಈ ಮೊದಲು ಹೊಸಗೆರಪ್ಪ ರವರು ನೀಡಿದ ಅರ್ಜಿಯ ಆದೇಶದ ಮೇರೆಗೆ ಪಹಣಿಯಲ್ಲಿರುವ ಶಂಕ್ರಪ್ಪರವರ ಹೆಸರನ್ನು ತೆಗೆದುಹಾಕಿ, ಹೊಸಗೆರಪ್ಪ ರವರ ಹೆಸರನ್ನು ಮೊದಲಿನಂತೆ ಮುಂದುವರೆಸಲು ತಾವು ನೀಡಿದ ಅರ್ಜಿ ಲಭ್ಯವಿಲ್ಲ ಎಂದು ದಾಖಲೆಯನ್ನು ನೀಡಿರುತ್ತಾರೆ, ಸಾಕ್ಷಿಯು ಕಡತದಲ್ಲಿರುವ ಸದರಿ ದಾಖಲೆಯ ದೃಢೀಕೃತ ಪ್ರತಿಯನ್ನು ನೋಡಿ ಗುರುತಿಸಿದ್ದು, **ಸದರಿ ದಾಖಲೆಯನ್ನು ನಿಶಾನೆಗೊಳಿಸಲು ತಕರಾರು ಸಲ್ಲಿಸಿದ್ದು, ಸದರಿ ದಾಖಲೆಯನ್ನು ತಕರಾರಿಗೆ ಒಳಪಟ್ಟು ನಿಪಿ-7 ಎಂದು** ಗುರುತಿಸಲಾಯಿತು. ಸಾಕ್ಷಿಯು ಎ.ಸಿ. ರವರ ಆದೇಶದ ಪ್ರತಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-8 ಎಂದು ಗುರುತಿಸಲಾಯಿತು.

ಸದರಿ ವಿಷಯದ ಬಗ್ಗೆ ಪೋಲೀಸರು ವಿಚಾರಣೆ ಮಾಡಿದ್ದರು, ನಾನು ಆ ಬಗ್ಗೆ ಹೇಳಿಕೆ ಕೊಟ್ಟಿದ್ದೆನು.

**ಪಾಟೀಸವಾಲು: 2 ನೇ ಆರೋಪಿ ಪರ ವಕೀಲರಿಂದ:-**

1. ಈರಣ್ಣ ತಂದೆ ದುರುಗಪ್ಪ ರವರ ಹೆಸರಿನಲ್ಲಿ ಎಷ್ಟು ಎಕರೆ ಆಸ್ತಿ ಇತ್ತು ಎಂದರೆ ಸಾಕ್ಷಿಯು ನಾನು ಕರ್ತವ್ಯಕ್ಕೆ ಹಾಜರಾಗುವ ಮುಂಚೆ ಈ ಘಟನೆ ನಡೆದಿತ್ತು ಎನ್ನುತ್ತಾರೆ. ನಿಪಿ-8 ರಲ್ಲಿ ತಹಶೀಲ್ದಾರ್ ರವರನ್ನು ಪಕ್ಷಗಾರರನ್ನಾಗಿ ಮಾಡಿದ್ದರು, ಅದನ್ನು ನೀವು ನೋಡಿರುತ್ತೀರಾ ಎಂದರೆ ಸಾಕ್ಷಿಯು ಮಾಡಿಲ್ಲ, ಆದರೆ ಆದೇಶ ಆಗಿತ್ತು ಎನ್ನುತ್ತಾರೆ. ಸದರಿ ಆದೇಶದ ಮೇಲೆ ಮೇಲ್ಮನವಿ ಆಗಿತ್ತು. ಮೇಲ್ಮನವಿ ಸಲ್ಲಿಸಲು ಒಬ್ಬ ಮೇಲ್ಮನವಿದಾರರು ಇರಬೇಕು, ನಿಮ್ಮ ಆದೇಶದ ಮೇರೆಗೆ ಮೇಲ್ಮನವಿ ಆಗುವುದಿಲ್ಲ ಎಂದರೆ ಸಾಕ್ಷಿಯು ಹೊಸಗೆರಪ್ಪಾ ರವರು ಮನವಿ ಸಲ್ಲಿಸಿದ್ದರು ಎನ್ನುತ್ತಾರೆ. ನಿಪಿ-8 ರಂತೆ ಮೇಲ್ಮನವಿ ಗ್ರಾ.ಲೆಕ್ಕಾಧಿಕಾರಿ, ಕಂದಾಯ ನಿರೀಕ್ಷಕರು, ತಹಶೀಲ್ದಾರ್, ಭೂಮಿ ಕೇಂದ್ರ ಶಿರಸ್ತೇದಾರ್ & ತಿರುಮಲೇಶ್ ರವರ ಮೇಲೆ ಹೊಸಗೆರಪ್ಪ ರವರು ಹಾಕಿದ್ದರು ಎಂದರೆ ಸರಿ.

ಸದರಿ ಮೇಲ್ಮನವಿಯ ಆದೇಶ ನಿಪಿ-೮ ರಂತೆ ಆಗುವುದಕ್ಕಿಂತ ಮುಂಚೆ ನನಗೆ ಯಾವುದೇ ನೋಟೀಸು ಬಂದಿರಲಿಲ್ಲ.

2. ಸರ್ವೆ ನಂ.758 2 ಎಕರೆ 28 ಗುಂಟೆ 2012-13 ರಲ್ಲಿ ಯಾರ ಹೆಸರಿನಲ್ಲಿತ್ತು ಎಂದರೆ ಸಾಕ್ಷಿಯು 2012 ರಲ್ಲಿ ಜಮೀನು ಹೊಸಗೇರಪ್ಪಾ ರವರ ಹೆಸರಿನಲ್ಲಿತ್ತು ಎನ್ನುತ್ತಾರೆ. ಹೊಸಗೇರಪ್ಪ ರವರ ಹೆಸರನ್ನು 2012 ಅಕ್ಟೋಬರ್‌ನಲ್ಲಿ ತೆಗೆದುಹಾಕಿದ್ದರು. ಮೇಲ್ಮನವಿ ಹಾಕಿದಾಗ ಆಸ್ತಿ ಶಂಕ್ರಪ್ಪರವರ ಹೆಸರಿನಲ್ಲಿತ್ತು. ನೀವು ಸುಳ್ಳು ಹೇಳುತ್ತಿದ್ದೀರಿ, ಆ ಕಾಲಕ್ಕೆ ಆಸ್ತಿ 2ನೇ ಆರೋಪಿಯ ಹೆಸರಿನಲ್ಲಿತ್ತು ಎಂದರೆ ಸಾಕ್ಷಿಯು ನಾನು ದಾಖಲೆಗಳ ಆಧಾರದ ಮೇಲೆ ಹೇಳುತ್ತಿದ್ದೇನೆ, ಸದ್ಯ ನನಗೆ ನೆನಪಿಲ್ಲ ಎನ್ನುತ್ತಾರೆ.

3. ಮೊದಲು 1 & 2ನೇ ಆರೋಪಿತರ ಹೆಸರಿನಲ್ಲಿ ಆಸ್ತಿ ಇತ್ತು ಎಂದರೆ ಸಾಕ್ಷಿಯು ಎ.ಸಿ. ರವರ ಆದೇಶ ಇಲ್ಲದೆ ಮ್ಯುಟೇಶನ್ ಆಗಿತ್ತು ಎನ್ನುತ್ತಾರೆ. ಸದರಿ ಮೇಲ್ಮನವಿಯಲ್ಲಿ 1 & 2ನೇ ಆರೋಪಿತರನ್ನು ಪಕ್ಷಗಾರರನ್ನಾಗಿ ಮಾಡದೆ ಆದೇಶ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಎ.ಸಿ. ರವರ ಆದೇಶ ಇಲ್ಲದೆ ಮ್ಯುಟೇಶನ್ ಆಗಿತ್ತು ಆದ್ದರಿಂದ ಆ ಮ್ಯುಟೇಶನನ್ನು ರದ್ದುಪಡಿಸಿದ್ದರು ಎನ್ನುತ್ತಾರೆ. ನಂತರ ಅದನ್ನು ಸರಿಪಡಿಸಿ ಹೊಸಗೇರಪ್ಪ ರವರ ಹೆಸರಿಗೆ ಮ್ಯುಟೇಶನ್ ಮಾಡಿದ್ದರು. ಸಾಕ್ಷಿಗೆ ಮ್ಯುಟೇಶನ್ ಹೆಚ್ 85 ನ್ನು ತೋರಿಸಿ ಇದರಂತೆ 2ನೇ ಆರೋಪಿಗೆ ಮ್ಯುಟೇಶನ್ ಆಗಿತ್ತು ಎಂದರೆ ಸಾಕ್ಷಿಯು ನನ್ನ ಅವಧಿಯಲ್ಲಿ ಮ್ಯುಟೇಶನ್ ಆಗಿತ್ತು ಎಂದು ಒಪ್ಪಿಕೊಂಡಿದ್ದರಿಂದ ಸದರಿ ದಾಖಲೆಯನ್ನು **ನಿಡಿ-1** ಎಂದು ಗುರುತಿಸಲಾಯಿತು. ನಂತರದಲ್ಲಿ ಸಾಕ್ಷಿಯು ಮುಂದುವರೆದು ನಾನು ಬರುವುದಕ್ಕಿಂತ ಮುಂಚೆ ಸದರಿ ಮ್ಯುಟೇಶನ್ ಆಗಿತ್ತು ಎನ್ನುತ್ತಾರೆ.

4. ನೀವು ಸಿಂಧನೂರಿನಲ್ಲಿ ದಿ.02-09-2013 ರಿಂದ 10-03-2014 ರ ಅವಧಿಯಲ್ಲಿ ನೀವು ಕರ್ತವ್ಯ ನಿರ್ವಹಿಸಿದ್ದೀರಿ, ನಿಮ್ಮ ಅವಧಿಯಲ್ಲಿಯೇ ನಿಡಿ-1 ಆಗಿರುತ್ತದೆ ಎಂದರೆ ಸಾಕ್ಷಿಯು ಅದು ನನ್ನ ಅವಧಿಯಲ್ಲಿ ಆಗಿಲ್ಲ ಎನ್ನುತ್ತಾರೆ.

**ಈಗ ಸಮಯ ಮಧ್ಯಾಹ್ನ 2 ಗಂಟೆ ಆಗಿದ್ದರಿಂದ ಮುಂದುವರೆದ ಪಾಟೀ ಸವಾಲನ್ನು ಮಧ್ಯಾಹ್ನ 2-45 ಕ್ಕೆ ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇದೆ.**

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ.,ಸಿಂಧನೂರು.

ದಿನಾಂಕ 04-06-2026 ರಂದು ಸಾಕ್ಷಿಯನ್ನು ಪುನಃ 3-36 ಕ್ಕೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀಸವಾಲುಃ 2 ನೇ ಆರೋಪಿ ಪರ ವಕೀಲರಿಂದಃ

5. ಎ.ಸಿ. ರವರ ಆದೇಶದ ಮೇರೆಗೆ ಪಹಣಿ ಆಗಿದೆ ಎಂದರೆ ಸಾಕ್ಷಿಯು ಆಗಿರಬಹುದು, ನನ್ನ ಅವಧಿಯಲ್ಲಿ ಆಗಿಲ್ಲ ಎನ್ನುತ್ತಾರೆ. 2012 ರಲ್ಲಿ ಪಹಣಿ ಶಂಕ್ರಪ್ಪ ರವರ ಹೆಸರಿನಲ್ಲಿ ಇತ್ತು ಎಂದರೆ ಸಾಕ್ಷಿಯು ನಾನು ಬರುವುದಕ್ಕಿಂತ ಮುಂಚೆ ಆಗಿರಬಹುದು, ಇದು ಕಂದಾಯದ ದಾಖಲೆ ಎನ್ನುತ್ತಾರೆ. ಸಾಕ್ಷಿಯು ಒಪ್ಪಿಕೊಂಡಿರುವ ಪಹಣಿಯ 1 ಪುಟವನ್ನು **ನಿಡಿ-2** ಎಂದು ಗುರುತಿಸಲಾಯಿತು.

6. ನಿಡಿ-1 ರ ಆಧಾರದ ಮೇರೆಗೆ 2 ನೇ ಆರೋಪಿಯ ಹೆಸರಿಗೆ ಪಹಣಿ ಆಗಿರುತ್ತದೆ ಎಂದರೆ ಸಾಕ್ಷಿಯು ನನ್ನ ಅವಧಿಯಲ್ಲಿ ಆಗಿರುತ್ತದೆ, ಇದೆ ಆ ಪಹಣಿ ಎಂದು ನೋಡಿ ಒಪ್ಪಿಕೊಂಡಿದ್ದರಿಂದ ಅದನ್ನು **ನಿಡಿ-3** ಎಂದು ಗುರುತಿಸಲಾಯಿತು.

7. ನಿಮ್ಮ ಅವಧಿಯಲ್ಲಿ 2 ನೇ ಆರೋಪಿಯ ಹೆಸರಿಗೆ ಪಹಣಿ ಆಗಿದೆ ಎಂದು ಎ.ಸಿ. ರವರಿಗೆ ಇಂಟಿಮೇಷನ್ ಮಾಡಿರುತ್ತೀರಾ ಎಂದರೆ ಸಾಕ್ಷಿಯು ಇಲ್ಲ ಎನ್ನುತ್ತಾರೆ. 2 ನೇ ಆರೋಪಿ ಆಸ್ತಿಯನ್ನು ಖರೀದಿ ಮಾಡಿದ್ದರು, ಆದ್ದರಿಂದ ನೀವು ಅವರ ಹೆಸರಿಗೆ ಮ್ಯುಟೇಶನ್ ಮಾಡಿ, ಪಹಣಿ ಮಾಡಿದ್ದಿರಿ ಎಂದರೆ ಸಾಕ್ಷಿಯು ನನಗೆ ಅದರ ಬಗ್ಗೆ ನಿಖರವಾದ ಮಾಹಿತಿ ಇಲ್ಲ ಎನ್ನುತ್ತಾರೆ. ನೀವು ಆರೋಪಿತರ ವಿರುದ್ಧ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. 2005 ರಲ್ಲಿ 1 ನೇ ಆರೋಪಿಯ ಹೆಸರಿನಲ್ಲಿ ಪಹಣಿ ಇತ್ತು, ಆದ್ದರಿಂದ ಅವರು 2 ನೇ ಆರೋಪಿಗೆ ಮಾರಾಟ ಮಾಡಿದ್ದರು ಎಂದರೆ ಸಾಕ್ಷಿಯು ನನಗೆ ಅದರ ಬಗ್ಗೆ ಮಾಹಿತಿ ಇಲ್ಲ ಎನ್ನುತ್ತಾರೆ. 1 ನೇ ಆರೋಪಿಯಿಂದ 2 ನೇ ಆರೋಪಿಯ ಹೆಸರಿಗೆ ವರ್ಗಾವಣೆ ಮಾಡುವ ಅವಧಿಯಲ್ಲಿ ತೆಗೆದುಹಾಕುವ ಅವಕಾಶ ಇರಲಿಲ್ಲ ಎಂದರೆ ಸಾಕ್ಷಿಯು ಎ. ಸಿ . ರವರ ಆದೇಶ ಇರದೇ ಇದ್ದರೂ ಸಹ ಹೊಸಗೇರಪ್ಪ ರವರ ಹೆಸರನ್ನು ತೆಗೆದು ಶಂಕ್ರಪ್ಪ ರವರ ಹೆಸರಿಗೆ ಮಾಡಿಸಿದ್ದರು ಎನ್ನುತ್ತಾರೆ. ಸದರಿ ಆಸ್ತಿ ಅ ಆಸ್ತಿಯೋ ಡ ಆಸ್ತಿಯೋ ಎಂದರೆ ಸಾಕ್ಷಿಯು ನನಗೆ ನೆನಪಿಲ್ಲ ಎನ್ನುತ್ತಾರೆ. ಹೊಸಗೇರಪ್ಪ ರವರಿಗೆ ತೆಗೆದುಹಾಕಿದ 1 ಎಕರೆ ಆಸ್ತಿ ಅ ಆಸ್ತಿ, ಅದು ಡ ಆಸ್ತಿ ಅಲ್ಲ ಎಂದರೆ ಸಾಕ್ಷಿಯು ಎ. ಸಿ. ರವರ ಆದೇಶ ಇಲ್ಲದೆ ಹೊಸಗೇರಪ್ಪ ರವರಿಗೆ ಆಸ್ತಿ ಮಾಡಿರುವುದು ತಪ್ಪು ಎನ್ನುತ್ತಾರೆ. ಅದರ ಸರ್ವೆ ನಂ.758*/1.

8. ಸಾಕ್ಷಿಗೆ ತನ್ನ ಹೇಳಿಕೆಯ 1ನೇ ಪ್ಯಾರಾದ 4-5 ನೇ ಸಾಲುಗಳನ್ನು ಓದಿ ಹೇಳಲಾಗಿ, ನೀವು ಈ ರೀತಿ ಹೇಳಿಕೆ ಕೊಟ್ಟಿದ್ದೀರಿ ಎಂದರೆ ಸರಿ.

9. ಹೊಸಗೆರಪ್ಪ ರವರು ಕೊಟ್ಟ ದೂರಿನ ಪ್ರತಿಯನ್ನು ನ್ಯಾಯಾಲಯಕ್ಕೆ ಕೊಟ್ಟಿರುತ್ತಾರೆ. ಸಾಕ್ಷಿಯು ಮುಂದುವರೆದು ಪೋಲೀಸರಿಗೆ ಕೊಟ್ಟಿದ್ದ ಬಗ್ಗೆ ನನಗೆ ನಿಖರವಾಗಿ ನೆನಪಿಲ್ಲ, ಆದರೆ ಎ.ಸಿ. ರವರಿಗೆ ಕೊಟ್ಟಿದ್ದೆ ಎನ್ನುತ್ತಾರೆ. ಅವರು ಏನೆಂದು ದೂರು ಕೊಟ್ಟಿದ್ದರು ಎಂದರೆ ಸಾಕ್ಷಿಯು 1974-75 ರಲ್ಲಿ ಅವರ ತಂದೆ ಆಸ್ತಿಯನ್ನು ಖರೀದಿ ಮಾಡಿದ್ದರು, ಆದರೆ ಮ್ಯುಟೇಶನ್ ಮಾಡಿಸಿಕೊಂಡಿರಲಿಲ್ಲ, 2002 ರಲ್ಲಿ ಮ್ಯುಟೇಶನ್ ಮಾಡಿಸಿಕೊಂಡಿದ್ದರು, 2011-12 ನೇ ಸಾಲಿನವರೆಗೆ ಅವರ ಹೆಸರಿನಲ್ಲಿ ಪಹಣಿ ಇತ್ತು, 2012 ರಲ್ಲಿ ಯಾವುದೇ ಕೋರ್ಟ್ ಆದೇಶ ಇಲ್ಲದೆ ಶಂಕ್ರಪ್ಪ ರವರ ಹೆಸರಿಗೆ ಪಹಣಿ ಆಗಿರುತ್ತದೆ ಎಂದು ನಮೂದು ಇರುತ್ತದೆ. ನಾನು 2002 ರಿಂದ 2012 ರವರೆಗೆ ಪಹಣಿಗಳನ್ನು ಪರಿಶೀಲಿಸಿ ಎ.ಸಿ. ರವರಿಗೆ ಕಳಿಸಿಕೊಟ್ಟಿದ್ದೆ. 2002 ರಲ್ಲಿ ಸದರಿಯವರು ಮ್ಯುಟೇಶನನ್ನು ಖರೀದಿ ಪತ್ರದ ಆಧಾರದ ಮೇಲೆ ಮಾಡಿದ್ದರು. ಆ ದಾಖಲೆಗಳನ್ನು ನಾನು ನೋಡಿಯೇ ವರದಿ ಮಾಡಿದ್ದೆ. ಆ ರೀತಿ ಯಾವುದೇ ಮ್ಯುಟೇಶನ್ ಇಲ್ಲ, ಮಾಡಿಸಿಕೊಂಡಿಲ್ಲ, ಮಾಡಿಸಿಕೊಂಡಿದ್ದಾರೆಂದು ನ್ಯಾಯಾಲಯದ ಮುಂದೆ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಸದರಿ ಮ್ಯುಟೇಶನ್ ಕ್ರಯ ಪತ್ರದ ಆಧಾರದ ಮೇರೆಗೆ ಆಗಿಲ್ಲ ಎಂದರೆ ಸರಿಯಲ್ಲ.

10. ಚಾಸಾ-1 & 2 ರವರ ರಾಜಕೀಯ ಪ್ರಭಾವಕ್ಕೆ ಒಳಗಾಗಿ ನೀವು ಈ ರೀತಿ ಸುಳ್ಳು ವರದಿ ನೀಡಿದ್ದಿರಿ, ಸದರಿ ವಿಷಯ ಪತ್ರಿಕೆಯಲ್ಲಿ ಪ್ರಕಟಣೆಯಾಗಿತ್ತು ಎಂದರೆ ಸರಿಯಲ್ಲ. ಚಾಸಾ-1 & 2 ರವರಿಗೆ ಅಕ್ರಮ ಲಾಭ ಮಾಡಿಕೊಡುವ ಉದ್ದೇಶದಿಂದ ಈ ರೀತಿ ಸುಳ್ಳು ಹೇಳಿಕೆ ಕೊಟ್ಟು, ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಆ ರೀತಿ ಸದರಿಯವರಿಗೆ ಯಾವುದೇ ಆಸ್ತಿ ಇಲ್ಲ ಎಂದರೆ ಸರಿಯಲ್ಲ.

11. ಆ ಖರೀದಿ ಪತ್ರ ನೀವು ನೋಡಿರುತ್ತೀರಾ ಎಂದರೆ ಸಾಕ್ಷಿಯು ಮ್ಯುಟೇಶನ್ ನೋಡಿದರೆ ಮುಗಿಯಿತು ಎನ್ನುತ್ತಾರೆ.

**ಪಾಟೀಸವಾಲುಃ 1 ನೇ ಆರೋಪಿ ಪರ ವಕೀಲರಿಂದಃ**

1. ತಹಶೀಲ್ದಾರ್ ಕಛೇರಿಯಲ್ಲಿ ರೆಕಾರ್ಡ್ ಕೀಪರ್ ಇರುತ್ತಾರೆ, ಅವರ ಮೇಲೆ ಒಬ್ಬ ಶಿರಸ್ತೇದಾರ್ ಇರುತ್ತಾರೆ. ಯಾವುದೇ ಅರ್ಜಿ ಬಂದರೆ ಶಿರಸ್ತೇದಾರ್ ರವರ ಗಮನಕ್ಕೆ ಬಂದೇ ಬರುತ್ತದೆ. ವಿ. ಎ. & ಆರ್. ಎ. ರವರ ಹೆಬ್ಬಟ್ಟಿನ ಗುರುತಿನ ಆಧಾರದ ಮೇರೆಗೆ ಮ್ಯುಟೇಶನ್ ಆಗುವುದು ಎಂದರೆ ಸರಿ.

2. ಸಾಕ್ಷಿಗೆ ನಿಮ್ಮ ಕಂದಾಯ ದಾಖಲೆಗಳನ್ನು ನೋಡಿದರೆ ಗುರುತಿಸುತ್ತೀರಾ ಎಂದರೆ ಸಾಕ್ಷಿಯು ಹೌದು ಗುರುತಿಸುತ್ತೇನೆ ಎನ್ನುತ್ತಾರೆ. ಸಾಕ್ಷಿಗೆ 1 ಕಂದಾಯ ದಾಖಲೆಯನ್ನು ತೋರಿಸಿ ಇದು ನಿಮ್ಮ ಇಲಾಖೆಗೆ ಸಂಬಂಧಿಸಿದ್ದು ಎಂದರೆ ಸಾಕ್ಷಿಯು ಹೌದು ನಮ್ಮ ಇಲಾಖೆಗೆ ಸಂಬಂಧಿಸಿದ್ದು ಎಂದು ನೋಡಿ ಗುರುತಿಸಿದ್ದು, ಅದನ್ನು **ನಿಡಿ-4** ಎಂದು ಗುರುತಿಸಲಾಯಿತು. ಸಾಕ್ಷಿಯು ಮುಂದುವರೆದು ನಾನು ಅದನ್ನು ಪರಿಶೀಲನೆ ಮಾಡಿಲ್ಲ ಎನ್ನುತ್ತಾರೆ.

3. ಚಾಸಾ-1 ರವರ ತಂದೆಯ ಹೆಸರು ಈರಪ್ಪ ತಂದೆ ಬಂಡೆಪ್ಪ ಎಂದರೆ ಸರಿ. ಚಾಸಾ-1 ರವರ ತಂದೆ ಈರಪ್ಪ ರವರು ತಮ್ಮ ಹೆಸರಿನಲ್ಲಿದ್ದ ಆಸ್ತಿಯನ್ನು ಪಂಪಣ್ಣ ತಂದೆ ಹನುಮಂತಪ್ಪ ರವರ ಹೆಸರಿಗೆ ಮಾರಾಟ ಮಾಡಿದ್ದರು ಎಂದರೆ ಸಾಕ್ಷಿಯು ಪರಿಶೀಲನೆ ಮಾಡದೆ ನನಗೆ ಒಪ್ಪಿಕೊಳ್ಳಲು ಸಾಧ್ಯವಿಲ್ಲ, ಈ ಕೇಸಿನಲ್ಲಿ ಆದಂತಹ ಘಟನೆ ಆಗಬಹುದು ಎನ್ನುತ್ತಾರೆ.

4. ನಿಮ್ಮ ಇಲಾಖೆಯಲ್ಲಿ ಮೂಲ ಮಾಲೀಕರ ಹೆಸರನ್ನು ರೌಂಡ್ ಮಾಡಿ, ಖರೀದಿ ಮಾಡಿ ಬರೆಯುತ್ತೀರಿ ಎಂದರೆ ಸಾಕ್ಷಿಯು ಮೊದಲು ಆ ರೀತಿ ಬರೆಯುತ್ತಿದ್ದೆವು, ಆ ರೀತಿ ಇತ್ತು, ಈಗ ಗಣಕೀಕೃತ ಪಹಣಿಗಳು ಬರುತ್ತಿವೆ, ಒಟ್ಟಾರೆ ಹೆಸರು ಡಿಲಿಟ್ ಆಗಿ ಖರೀದಿದಾರರ ಹೆಸರು ಬರುತ್ತದೆ ಎನ್ನುತ್ತಾರೆ. ನಿಡಿ-4 ರಲ್ಲಿ ಮೂಲ ಮಾಲೀಕರ ಹೆಸರನ್ನು ರೌಂಡ್ ಮಾಡಿ, ಖರೀದಿದಾರರ ಹೆಸರನ್ನು ಬರೆದಿದ್ದಾರಾ ಎಂದರೆ ಸಾಕ್ಷಿಯು ಪರಿಶೀಲನೆ ಮಾಡದೆ ಹೇಳಲು ಆಗುವುದಿಲ್ಲ ಎನ್ನುತ್ತಾರೆ.

5. ಚಾಸಾ-1 ರವರು ತಮಗೆ ಸೇರಿದ 1 ಎಕರೆ ಆಸ್ತಿಯನ್ನು ಈಗಾಗಲೇ ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿಯು ಪರಿಶೀಲನೆ ಮಾಡದೆ ಹೇಳಲು ಆಗುವುದಿಲ್ಲ, 1974 ರಿಂದ 2001-02 ರವರೆಗೆ ಅವರು ಮ್ಯುಟೇಶನ್ ಮಾಡಿಸಿಕೊಂಡಿರಲಿಲ್ಲ, ಈ ಅವಧಿಲ್ಲಿ ಏನಾದರೂ ಆಗಬಹುದು, ಆದ್ದರಿಂದ ಪರಿಶೀಲನೆ ಮಾಡದೆ ಹೇಳಲು ಆಗುವುದಿಲ್ಲ ಎನ್ನುತ್ತಾರೆ.

6. ನಾನು 1974 ರಿಂದ ದಾಖಲೆಗಳನ್ನು ಪರಿಶೀಲನೆ ಮಾಡಿಲ್ಲ. ನಾನು 1974 ರಿಂದ ದಾಖಲೆಗಳನ್ನು ಪರಿಶೀಲನೆ ಮಾಡದೆ ಹಿಂಬರಹವನ್ನು ಕೊಟ್ಟಿದ್ದೆ. ನಿಪಿ-7 ರಲ್ಲಿ ನಾನು ದಾಖಲೆಗಳನ್ನು ಪರಿಶೀಲನೆ ಮಾಡಿದ ಬಗ್ಗೆ ನಮೂದು ಮಾಡಿಲ್ಲ. ಚಾಸಾ-2 ರವರ ಪ್ರಭಾವದಿಂದ ನೀವು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೂ 1 ನೇ ಆರೋಪಿಗೂ ಯಾವುದೇ ಸಂಬಂಧ ಇಲ್ಲ, ನೀವು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

7. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ವಿ.ಎ. & ಆರ್. ಎ. ರವರು ತಮ್ಮ ಹೆಬ್ಬಟ್ಟಿನ ಗುರುತನ್ನು ಮ್ಯುಟೇಶನ್ ಮಾಡಲು ಕೊಟ್ಟಿರುವುದಿಲ್ಲ. ಸದರಿಯವರಿಗೆ ಲಾಗಿನ್ ಓಪನ್ ಮಾಡಲು ಒಂದು ಕೋಡ್ ಕೊಟ್ಟಿರುತ್ತಾರೆ ಎಂದರೆ ಸರಿ. ವಿ. ಎ. & ಆರ್. ಎ. ರವರ ನಂತರ ಶಿರಸ್ತೇದಾರ್ ರವರ ಲೆವೆಲ್ ಗೆ ಮಾತ್ರ ಅದು ಕೋಡ್ ಇರುತ್ತದೆ, ತಹಶೀಲ್ದಾರ್ ರವರಿಗೆ ಅದು ಬರುವುದಿಲ್ಲ ಆದರೆ ಸರ್ಕಾರಿ ಜಮೀನು ಇದ್ದರೆ ಮಾತ್ರ ತಹಶೀಲ್ದಾರ್ ರವರಿಗೆ ಕೋಡ್ ಬರುತ್ತದೆ ಎನ್ನುತ್ತಾರೆ.

8. ಯಾವುದೇ ಪಹಣಿಯನ್ನು ತಿದ್ದುಪಡಿ ಮಾಡಬೇಕೆಂದರೆ ಸಹಾಯಕ ಆಯುಕ್ತರ ಲೆವೆಲ್ ಗೆ ಅದು ಆಗುತ್ತಿತ್ತು ಎಂದರೆ ಸಾಕ್ಷಿಯು ಆರ್. ಐ. & ವಿ. ಎ. ಲೆವೆಲ್ ಗೆ ಅದು ಆಗುತ್ತಿತ್ತು, ಆದರೆ ಈಗ ಏನಾಗಿದೆ ನನಗೆ ಗೊತ್ತಿಲ್ಲ. ಆ ರೀತಿ ಯಾವುದೇ ತಿದ್ದುಪಡಿ ಆಗಿಲ್ಲ, ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

**ಪಾಟೀಸವಾಲುಃ 3 & 4 ನೇ ಆರೋಪಿತರ ಪರ ವಕೀಲರಿಂದಃ**

1. ಕಂದಾಯ ಇಲಾಖೆಯಲ್ಲಿ 2000/01 ರಲ್ಲಿ ಗಣಕೀಕೃತ ವ್ಯವಸ್ಥೆ ಜಾರಿಗೆ ಬಂದಿರುತ್ತದೆ. ಆರ್. ಐ & ವಿ. ಐ. ರವರು ಅಪ್ರೂವ್ ಮಾಡಿದರೆ ಮಾತ್ರ ಮ್ಯುಟೇಶನ್ ಬರುತ್ತದೆ ಎಂದರೆ ಸಾಕ್ಷಿಯು ಅದಕ್ಕೆ 30 ದಿನಗಳ ಅವಧಿ ಇರುತ್ತದೆ ಎನ್ನುತ್ತಾರೆ. ಮ್ಯುಟೇಶನ್ ಅಪ್ರೂವ್ ಆಗಬೇಕೆಂದರೆ ಸಂಬಂಧಪಟ್ಟ ಅಧಿಕಾರಿಗಳ ವರದಿ, ಸಹಿ & ಹೆಬ್ಬಟ್ಟಿನ ಗುರುತು ಇದ್ದರೆ ಮಾತ್ರ ಅದು ಅಪ್ರೂವ್ ಆಗುತ್ತದೆ ಎಂದರೆ ಸರಿ. ಅವರು ಅಪ್ರೂವ್ ಮಾಡದೆ ಇದ್ದರೆ ಮ್ಯುಟೇಶನ್ ಆಗುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಈ ಪ್ರಕರಣದಲ್ಲಿ ಆ ರೀತಿ ಆಗಿರುವುದಿಲ್ಲ ಎನ್ನುತ್ತಾರೆ.

2. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪೋಲೀಸರಿಗೆ ನಾನು ಹೇಳಿಕೆ ಕೊಟ್ಟಿರುತ್ತೇನೆ. ನಾನು ಪೋಲೀಸರಿಗೆ ಕೊಟ್ಟ ಹೇಳಿಕೆಯ ಪ್ರತಿಯನ್ನು ನೋಡಿರುತ್ತೇನೆ.

3. ಸಾಕ್ಷಿಗೆ ತನ್ನ ಹೇಳಿಕೆಯ ಸಾಲುಗಳನ್ನು ಓದಿ ಹೇಳಲಾಗಿ ನೀವು ಈ ರೀತಿ ಹೇಳಿಕೆ ಕೊಟ್ಟಿರುತ್ತೀರಿ ಎಂದರೆ ಸರಿ. ನಿಮ್ಮ ಹೇಳಿಕೆಯಲ್ಲಿ ಬರೆದಿರುವ ವಿನಾಯಿತಿ ಶಬ್ದದ ಅರ್ಥ ಏನು ಎಂದರೆ ಸಾಕ್ಷಿಯು Exemption ಎನ್ನುತ್ತಾರೆ. ಸಂಬಂಧಪಟ್ಟ ಅಧಿಕಾರಿಗಳ ಅನುಮತಿ ಇಲ್ಲದೆ ಯಾವುದನ್ನೂ ಅಪ್ರೂವ್ ಮಾಡಲು ಸಾಧ್ಯವಿಲ್ಲ ಎಂದರೆ ಸಾಕ್ಷಿಯು ಯಾರೂ ಇಲ್ಲದೆ ಮಾಡುವುದೇ ಕೃತ್ಯ, ಅದು ಅಪರಾಧ ಆಗುತ್ತದೆ, 4 ನೇ ಆರೋಪಿ ಮಾಡಿರುತ್ತಾರೆ ಎನ್ನುತ್ತಾರೆ.

4. ಈ ಅಪರಾಧ ಮಾಡುವ ಕಾಲಕ್ಕೆ 4 ನೇ ಆರೋಪಿ ಸರ್ಕಾರಿ ನೌಕರ ಆಗಿದ್ದ. ಸದರಿ 4 ನೇ ಆರೋಪಿಯು ಮಾಡಿದ ಕೃತ್ಯದ ಬಗ್ಗೆ ಶಿಸ್ತಿನ ಕ್ರಮ ಕೈಗೊಳ್ಳಬೇಕೆಂದು ಡಿಸಿ ರವರಿಗೆ ತಿಳಿಸಿರುತ್ತೀರಾ ಎಂದರೆ ಸಾಕ್ಷಿಯು ನಾನು ಎ.ಸಿ. ರವರಿಗೆ ಪತ್ರದ ಮುಖೇನ ಬರೆದು ತಿಳಿಸಿರುತ್ತೇನೆ ಎನ್ನುತ್ತಾರೆ. ಅದನ್ನು ಆತ ಯಾವ ರೀತಿ ಮಾಡಿದ್ದಾನೆಂದು ನೀವು ತೀರ್ಮಾನಕ್ಕೆ ಬಂದಿರುತ್ತೀರಿ ಎಂದರೆ ಸಾಕ್ಷಿಯು ಎ. ಸಿ. ರವರ ಆದೇಶ ಇಲ್ಲದೆ ವಿ. ಎ. , ಆರ್ ಐ ರವರ ವರದಿ ಇಲ್ಲದೆ ಮಾಡಿರುವುದು ತಪ್ಪು ಎನ್ನುತ್ತಾರೆ.

5. 4 ನೇ ಆರೋಪಿ ಮಾಡಿರುವ ತಪ್ಪನ್ನು ನೀವು ಕಣ್ಣಾರೆ ನೋಡಿಲ್ಲ ಎಂದರೆ ಸಾಕ್ಷಿಯು ನಾನು ಕರ್ತವ್ಯಕ್ಕೆ ಹಾಜರಾಗುವುದಕ್ಕಿಂತ ಮುಂಚೆಯೇ ಆತ ಮಾಡಿದ್ದ ಎನ್ನುತ್ತಾರೆ.

6. ಆ ಕಾಲಕ್ಕೆ ತಹಶೀಲ್ದಾರ್ ಆಗಿ ಯಾರು ಇದ್ದರು ಎಂದರೆ ಸಾಕ್ಷಿಯು ನನಗೆ ಸರಿಯಾಗಿ ನೆನಪು ಬರುತ್ತಿಲ್ಲ ಎನ್ನುತ್ತಾರೆ.

7. ಭೂಮಿ ಶಿರಸ್ತೇದಾರ್ ತಮ್ಮ ಲಾಗಿನ್ ಮುಖಾಂತರ ತೆರೆದು ಪರಿಶೀಲನೆ ಮಾಡುತ್ತಿದ್ದರು ಎಂದರೆ ಸರಿ.

8. 2011-12 ಸಾಲಿನಲ್ಲಿ ನಿಮ್ಮ ಕಛೇರಿಯಲ್ಲಿ ಎಷ್ಟು ಕಂಪ್ಯೂಟರ್ ಗಳು ಇದ್ದವು ಎಂದರೆ ಸಾಕ್ಷಿಯು ಸರಿಯಾಗಿ ನನಗೆ ನೆನಪಿಲ್ಲ ಎನ್ನುತ್ತಾರೆ. ಆಗ ಎಷ್ಟು ಜನ ಸಿಬ್ಬಂದಿ ಕಂಪ್ಯೂಟರ್ ಕೆಲಸ ಮಾಡುತ್ತಿದ್ದರು ಎಂದರೆ ಸಾಕ್ಷಿಯು ನಿಖರವಾದ ಸಂಖ್ಯೆಯನ್ನು ಹೇಳಲು ಆಗುವುದಿಲ್ಲ ಏಕೆಂದರೆ ನನಗೆ ನೆನಪಿಲ್ಲ ಎನ್ನುತ್ತಾರೆ.

9. ಸದರಿ ಕಂಪ್ಯೂಟರ್ ಆಪರೇಟರ್ ಏನಾದರೂ ಕೆಲಸ ಇದ್ದರೆ ನಿಮ್ಮನ್ನು ಭೇಟಿಯಾಗಲು ಬರುತ್ತಿರುತ್ತಾರೆ ಎಂದರೆ ಸರಿ. ಆ ರೀತಿ ಅವರು ನಿಮ್ಮ ಬಳಿ ಬಂದಾಗ ಬೇರೆ ಯಾರಾದರೂ ಉಪಯೋಗ ಮಾಡುವ ಸಂಭವ ಇರಬಹುದಾ ಎಂದರೆ ಸಾಕ್ಷಿಯು ಅದನ್ನು ಖಚಿತವಾಗಿ ಹೇಳಲು ಆಗುವುದಿಲ್ಲ ಎನ್ನುತ್ತಾರೆ. ಸಾಕ್ಷಿಯು ಮುಂದುವರೆದು ಆ ರೀತಿ ಆಪರೇಟ್ ಮಾಡಿದ್ದರೆ ಯಾರು ಎಂಬುದು ಸಿಗುತ್ತದೆ ಎನ್ನುತ್ತಾರೆ.

10. 4 ನೇ ಆರೋಪಿ ಆ ದಿನ ಕರ್ತವ್ಯದಲ್ಲಿದ್ದರು ಎಂದು ಖಚಿತಪಡಿಸಿಕೊಳ್ಳಲು ನಾನು ಹಾಜರಾತಿ ಪುಸ್ತಕವನ್ನು ನೋಡಿದ್ದೆ ಎನ್ನುತ್ತಾರೆ. ದೂರು ಕೊಡುವುದಕ್ಕಿಂತ ಮುಂಚೆ ಟೆಕ್ನಿಕಲ್ ಅಧಿಕಾರಿಗಳಿಂದ ನಾನು ಮಾಹಿತಿ ಪಡೆದು ಮುಂದಿನ ಆದೇಶಕ್ಕಾಗಿ ವರದಿ ಮಾಡಿರುತ್ತೇನೆ.

11. ಆ ದಿನ 4 ನೇ ಆರೋಪಿ ಯಾವ ಕಂಪ್ಯೂಟರ್ ನಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸಾಕ್ಷಿಯು ಅದನ್ನು ನಾನು ಮಾಡಿಲ್ಲ ಆದರೆ ಲಾಗಿನ್ ಮಾಡಿದ ಬಗ್ಗೆ ಮಾಹಿತಿ ಪಡೆದು, ಮುಂದಿನ ಆದೇಶಕ್ಕಾಗಿ ಮೇಲಾಧಿಕಾರಿಎ ವರದಿ ಮಾಡಿರುತ್ತೇನೆ ಎನ್ನುತ್ತಾರೆ. 4 ನೇ ಆರೋಪಿಯೇ ಆ ರೀತಿ ಮಾಡಿದ್ದಾರೆಂದು ನಿಮಗೆ ತಿಳಿಸಿರುತ್ತಾರೆ ಎಂದರೆ ಸಾಕ್ಷಿಯು ಆರ್. ಐ., ವಿ.ಐ., & ಶಿರಸ್ತೇದಾರ್ ರವರು 4 ನೇ ಆರೋಪಿ ಮಾಡಿದ್ದರು ಎಂದು ತಿಳಿಸಿದ್ದರು ಎನ್ನುತ್ತಾರೆ. ಭೂಮಿ ಶಿರಸ್ತೇದಾರ್ ರವರು ಹೆಬ್ಬೆಟ್ಟು ಒತ್ತಿದರೆ ಮಾತ್ರ ಮ್ಯುಟೇಶನ್ ಅಪ್ರೂವ್ ಆಗುತ್ತದೆ ಎಂದರೆ ಸರಿ ಆದರೆ ಈ ಪ್ರಕರಣದಲ್ಲಿ ಆ ರೀತಿ ಆಗಿರುವುದಿಲ್ಲ ಎನ್ನುತ್ತಾರೆ.

12. ನಿಮಗೆ ವೈಯಕ್ತಿಕವಾಗಿ ಕಂಪ್ಯೂಟರ್ ಆಪರೇಟ್ ಮಾಡುವ ಬಗ್ಗೆ ಜ್ಞಾನ ಇಲ್ಲ ಎಂದರೆ ಸರಿ. ನೀವು ಅವರಿಂದ ಖಚಿತ ವರದಿ ಪಡೆದಿಲ್ಲ ಎಂದರೆ ಸರಿ.

13. 4 ನೇ ಆರೋಪಿ ಆ ದಿನ ಕೆಲಸಕ್ಕೆ ಬಂದಿರಲಿಲ್ಲ, ಆದ್ದರಿಂದ ಆ ರೀತಿ ಮಾಡಿರಲು ಸಾಧ್ಯವೇ ಇಲ್ಲ ಎಂದರೆ ಸರಿಯಲ್ಲ.

14. ಸಾಮಾನ್ಯವಾಗಿ ರೈತರು ಗಣಕೀಕೃತ ಪಹಣಿಗಳನ್ನು ನೋಡಿ ಇದು ಸರಿಯಾಗಿದೆ ಎಂದು ನಂಬುತ್ತಾರೆ ಎಂದರೆ ಸರಿ, ಆದರೆ ಇಂತವರಿಂದ ಜನರಿಗೆ ವಂಚನೆ ಆಗುತ್ತದೆ ಎನ್ನುತ್ತಾರೆ.

15. ಮ್ಯುಟೇಶನ್ 47 ನ್ನು ಮಾಡುವ ಕಾಲಕ್ಕೆ ಭೂಮಿ ಶಿರಸ್ತೇದಾರ್, ತಹಶೀಲ್ದಾರ್ ಯಾರು ಇದ್ದರು ಎಂದರೆ ಸಾಕ್ಷಿಯು ವಿ.ಎ. ಯೂನೂಸ್ ರವರು, ಆರ್ .ಐ ಮಿಶ್ರಕೋಟೆ, ಶಿರಸ್ತೇದಾರ್ ರಾಮಣ್ಣ ಇದ್ದರು ಎನ್ನುತ್ತಾರೆ.

16. ಚಾಸಾ-1 ರವರು ದೂರು ಕೊಟ್ಟ ನಂತರ ನಾನು ವಿ.ಎ., ಆರ್ ಐ & ಶಿರಸ್ತೇದಾರ್ ರವರಿಂದ ಲಿಖಿತ ಹೇಳಿಕೆಗಳನ್ನು ಪಡೆದಿಲ್ಲ, ಆದರೆ ಮೌಖಿಕವಾಗಿ ಕೇಳಿ ಹೇಳಿಕೆ ಪಡೆದಿದ್ದೆ ಎನ್ನುತ್ತಾರೆ. ಅದೇ ರೀತಿಯಾಗಿ ಲಿಖಿತವಾಗಿ 4 ನೇ ಆರೋಪಿಗೆ ನೋಟೀಸು ಕೊಟ್ಟಿರುತ್ತೀರಾ ಎಂದರೆ ಸಾಕ್ಷಿಯು ನಾನು ಕರ್ತವ್ಯಕ್ಕೆ ಹಾಜರಾದಾಗ 4 ನೇ ಆರೋಪಿ ಮಾನವಿಗೆ ವರ್ಗಾವಣೆಗೊಂಡಿದ್ದ, ಬೇರೆ ತಹಶೀಲ್ ಕಛೇರಿಯಲ್ಲಿ ಕಾರ್ಯನಿರ್ವಹಿಸುವ ಸಿಬ್ಬಂದಿಗೆ ನನಗೆ ನೋಟೀಸು ಕೊಡಲು ಬರುವುದಿಲ್ಲ, ಆದ್ದರಿಂದ ಕೊಟ್ಟಿಲ್ಲ ಎನ್ನುತ್ತಾರೆ. ಆ ರೀತಿ ನೀವು ವಿಚಾರಣೆ ಮಾಡಬೇಕೆಂದರೆ ಮೇಲಾಧಿಕಾರಿಗಳಿಂದ ಅನುಮತಿ ಪಡೆದು ಮಾಡಬಹುದು ಎಂದರೆ ಸಾಕ್ಷಿಯು ಆ ರೀತಿ ವಿಚಾರಣೆ ಡಿ.ಸಿ. ರವರು ಮಾಡಬೇಕು, ನಾನು ಮಾಡಲು ಬರುವುದಿಲ್ಲ ಎನ್ನುತ್ತಾರೆ. ಈಗ ನೀವು ಹೇಳಿರುವುದು ಡಿ.ಇ. ಮಾಡುವ ಕಾಲಕ್ಕೆ ಬರುತ್ತದೆ, ಆದರೆ ಈ ಕೇಸಿಗೆ ಸಂಬಂಧಿಸಿದಂತೆ ನೀವು ವಿಚಾರಣೆ ಮಾಡುವ ಅವಕಾಶ ಇತ್ತು ಎಂದರೆ ಸಾಕ್ಷಿಯು ಈ ರೀತಿ ವಿಚಾರಣೆ ಮಾಡುವ ಅಧಿಕಾರ ಎ.ಸಿ. ರವರಿಗಿದೆ, ನನಗೆ ಇಲ್ಲ ಎನ್ನುತ್ತಾರೆ. ಎ.ಸಿ. ರವರಿಗೆ ಸಬ್ ಡಿವಿಜನ್ ವ್ಯಾಪ್ತಿಯ ಒಳಗೆ ಇದ್ದರೆ ಮಾತ್ರ ಅಧಿಕಾರ ಇದೆ, ಇಲ್ಲವೆಂದರೆ ಡಿ.ಸಿ. ರವರು ಮಾಡಬೇಕು ಎನ್ನುತ್ತಾರೆ.

17. 4 ನೇ ಆರೋಪಿಯನ್ನು ನನ್ನ ಮೇಲಾಧಿಕಾರಿಗಳು ಕರೆದು ವಿಚಾರಣೆ ಮಾಡಿದ ಬಗ್ಗೆ ನನ್ನ ಗಮನಕ್ಕೆ ಬಂದಿರುವುದಿಲ್ಲ.

18. ತಂಬ್ ಇಂಪ್ರೆಷನ್ ಕೊಡದೆ ಪಹಣಿಗಳು ಬದಲಾವಣೆ ಆದ ಉದಾಹರಣೆಗಳು ಇವೆ ಎಂದರೆ ಸಾಕ್ಷಿಯು ಈ ಪ್ರಕರಣದಲ್ಲಿ ಯಾರದೇ ಹೆಬ್ಬಟ್ಟಿನ ಗುರುತು ಪಡೆಯದೆ ಕೃತ್ಯ ಮಾಡಿದ್ದಾರೆ ಎನ್ನುತ್ತಾರೆ.

19. ಆರೋಪಿತರು ಈ ಪ್ರಕರಣದಲ್ಲಿ ಶಾಮೀಲಾಗಿಲ್ಲ ಎಂದರೆ ಸರಿಯಲ್ಲ. ನಿಜವಾಗಿ ಅಪರಾಧ ಆಗಿದ್ದರೆ ಆರ್ ಐ, ವಿ.ಎ & ಶಿರಸ್ತೇದಾರ್ ಶಾಮೀಲಾಗಿರುತ್ತಿದ್ದರು ಎಂದರೆ ಸಾಕ್ಷಿಯು ಯಾರೂ ಇಲ್ಲದೆ ಆತ ಒಬ್ಬನೇ ಈ ರೀತಿ ಮಾಡಿದ್ದಾನೆ ಎನ್ನುತ್ತಾರೆ.

20. ಈ ಪ್ರಕರಣದಲ್ಲಿ 4 ನೇ ಆರೋಪಿ ಯಾವುದೇ ತಪ್ಪು ಮಾಡಿಲ್ಲ ಎಂದರೆ ಸರಿಯಲ್ಲ. ನೀವು ಪೋಲೀಸರಿಗೆ ಯಾವುದೇ ಹೇಳಿಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಃ-

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ.,ಸಿಂಧನೂರು.